# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ

ಪುಟ : ೪ ಸಂಪುಟ : ೭೧ ಸಂಚಿಕೆ : ೧೦

15-10-2025 ಆಶ್ವಯುಜ ಮಾಸ : ಕೃಷ್ಣ ಪಕ್ಷ ಬುಧವಾರ

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ



ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಶ್ರೀಕ್ಷೇತ್ರ ಹೊಂಬುಜ




## ಶುಭಾಶೀರ್ವಚನ

## "ಜ್ಞಾನದೀಪ ನಮ್ಮನ್ನು ಬೆಳಗಿಸಲಿ"

ದೀಪಾವಳಿ ಬಂದಿದೆ. ಹಬ್ಬಗಳ ರಾಜನಾಗಿ ಎಲ್ಲರಮನೆ-ಮನಸ್ಸನ್ನು ಪ್ರಸನ್ನಗೊಳಿಸುವಂತ ಸಂಭ್ರಮದ ಸೌಹಾರ್ದದ ಕ್ಷಣ ಈ ದೀಪಾವಳಿ. ಭಾರತೀಯರಲ್ಲಿ ದೀಪಾವಳಿಯ ಹಿನ್ನೆಲೆಯಲ್ಲಿ ಅನೇಕ ಪೌರಾಣಿಕ ಮತ್ತು ಐತಿಹಾಸಿಕ ಘಟನೆಗಳು ಇದ್ದಾವೆ. ದೀಪಗಳನ್ನು ಬೆಳಗಿಸುವ ಮೂಲಕ ನಮ್ಮ ಸುತ್ತ-ಮುತ್ತಲಿನ ಕತ್ತಲೆಯನ್ನು ದೂರಮಾಡಿ ಸಂಭ್ರಮಿಸುತ್ತೇವೆ. ಹಾಗೆಯೇ ಮನದ ಮೌಢ್ಯವನ್ನು ಕಳೆಯಲೆಂದೇ ಈ ಪರ್ವವು ಬರುವುದೆಂದು ಹೇಳುತ್ತಾರೆ.

ದಿನಗಳೂ ಉರುಳಿದಂತೆ ನಾವೆಲ್ಲರೂ ಸಾಗಿ ಬರುವ ದಾರಿ ದೀರ್ಘವಾಗಿದ್ದರೂ, ಅರಿವಿರುವುದಿಲ್ಲ. ಪ್ರತಿಯೊಂದು ಪರ್ವ(ಹಬ್ಬ)ಗಳಿಗೂ ಜೈನ ಧರ್ಮದಲ್ಲಿ ವಿಶಿಷ್ಟ ಹಿನ್ನೆಲೆ ಇದೆ. ಅಂತೆಯೇ ದೀಪಾವಳಿ ಹಬ್ಬಕ್ಕೂ ಇದೆ. ವರ್ತಮಾನ ಕಾಲದ 24ನೇ ಹಾಗೂ ಅಂತಿಮ ತೀರ್ಥಂಕರ ಭಗವಾನ ಶ್ರೀಮಹಾವೀರರು ನಿರ್ವಾಣ (ಮೋಕ್ಷ) ಹೊಂದಿದ ದಿವಸ. ಮಹಾವೀರರು ಈಗಿನ ಬಿಹಾರದ ವೈಶಾಲಿ (ಕುಂಡಲಪುರ) ಯಲ್ಲಿ ಜನಿಸಿದ್ದರು. ತಂದೆ ರಾಜಾ ಸಿದ್ಧಾರ್ಥ, ತಾಯಿ ತ್ರಿಶಲಾ (ಪ್ರಿಯಕಾರಿಣಿ). ತಮ್ಮ ಯುವಾವಸ್ಥೆಯಲ್ಲಿಯೇ ಅಂದರೆ 30ನೇ ವಯಸ್ಸಿನಲ್ಲಿಯೇ ವೈರಾಗ್ಯ ಹೊಂದಿ ನಿಗ್ರಂಥ ದೀಕ್ಷೆ ತೆಗೆದುಕೊಂಡರು. ನಂತರ 12 ವರ್ಷದವರೆಗೆ ಕಠಿಣ ತಪಸ್ಸು ಮಾಡುವ ಮೂಲಕ 42ನೇ ವಯಸ್ಸಿನಲ್ಲಿ ಕರ್ಮನಿರ್ಜರೆಯನ್ನು ಮಾಡಿ ಅರಿಹಂತ (ಕೇವಲಜ್ಞಾನಿ) ರಾದರು. ಸಮವಸರಣದಲ್ಲಿ ದಿವ್ಯ ಧ್ವನಿ ಮೂಲಕ ಧರ್ಮೋಪದೇಶ ನೀಡಿದರು. ಅನೇಂಕಾತವಾದ, ಅಹಿಂಸೆ, ಪರೋಪಕಾರ ಧರ್ಮದ ಉಪದೇಶವನ್ನು ಮಾಡಿದರು.

ತಮ್ಮ ಜೀವನದ ಅತ್ಯಮೂಲ್ಯ ಕ್ಷಣಗಳನ್ನು ಸರ್ವ ಜೀವಿಗಳೊಂದಿಗೆ ಪರೋಪಕಾರ ಭಾವನೆಯಿಂದ ಬದುಕುವ ಮೌಲ್ಯಗಳನ್ನು ಹೇಳಿಕೊಟ್ಟರು. ಯಾವಾಗ ತಮ್ಮ ಆಯುಷ್ಯವು ಅಂತಿಮ ಸ್ಥಿತಿಯಲ್ಲಿದೆ ಎಂಬುದು ಅರಿವಾಯಿತೋ, ಆವಾಗ ಮತ್ತೆ ಧ್ಯಾನ ಮಗ್ನರಾಗಿ ಉಳಿದ ಕರ್ಮಗಳನ್ನು ಭಸ್ಮಮಾಡುತ್ತಾರೆ. ಮೋಕ್ಷಪದವಿ ಹೊಂದುತ್ತಾರೆ. ಮಹಾವೀರ ಸಿದ್ಧರಾಗುತ್ತಾರೆ. ಮಹಾವೀರ ಸ್ವಾಮಿಗಳು ತಪಸ್ಸು ಮಾಡುವ ಮೂಲಕ ಮುಕ್ತಿಯನ್ನು ಹೊಂದಿದ ದಿವಸ ಕಾರ್ತಿಕ ಕೃಷ್ಣ ಚತುರ್ದಶಿಯ ಅಂತಿಮ ಪ್ರಹರ (ಅಮವಾಸ್ಯೆಯ ಪ್ರಾರಂಭಕ್ಕೆ ಮುನ್ನ)ದಲ್ಲಿ ಆಗಿರುತ್ತದೆ.


WWW.HOMBUJAPADMAVATI.ORG


ಅದೇ ಸಾಯಂಕಾಲ ಶ್ರೀಮಹಾವೀರ ಸ್ವಾಮಿಯ ಪ್ರಥಮ ಗಣಧರ ಗೌತಮ (ಇಂದ್ರಭೂತಿ)ರಿಗೆ ಕೇವಲ ಜ್ಞಾನ ಪ್ರಾಪ್ತವಾಗುತ್ತದೆ. ದೇವ-ಮನುಷ್ಯರಿಗೆ ಸಂತೋಷ ಇಮ್ಮಡಿಯಾಗುತ್ತದೆ. ಲೋಕದಲ್ಲಿ ಈ ಮೊದಲು ಭಗವಾನ್ ಶ್ರೀಮಹಾವೀರ ನಿರ್ವಾಣವಾದೊಡೆ ಜನರು ಕತ್ತಲಾದಂತೆ ಭಾವಿಸಿರುತ್ತಾರೆ. ನಮಗೆ ಇನ್ನಾರು ಜ್ಞಾನ ಜ್ಯೋತಿಯನ್ನು ನೀಡುವವರು? ನಮ್ಮ ಅಜ್ಞಾನವನ್ನು ದೂರ ಮಾಡುವವರು ಯಾರೆಂದು ಚಿಂತಿಸುತ್ತಿರುವಾಗಲೇ ಗೌತಮರಿಗೆ ಕೇವಲ ಜ್ಞಾನ ಪ್ರಾಪ್ತಿಯಾಗುತ್ತದೆ. ಜಗತ್ತೇ ಆನಂದದಿಂದ ಸಂಭ್ರಮಿಸುತ್ತದೆ. ನಮ್ಮಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಮತ್ತೊಬ್ಬ ಮಹಾಪುರುಷರು ಇದ್ದಾರೆ ಎಂಬ ಆಸೆಯಿಂದ ದೇವತೆಗಳು ಮತ್ತು ಮನುಷ್ಯರೆಲ್ಲ ಆ ದಿವಸವೇ ಲಕ್ಷ ಲಕ್ಷ ದೀಪಗಳನ್ನು ಹಚ್ಚಿ ಇನ್ನು ಜಗತ್ತಿಗೆ ಕತ್ತಲಾಗುವುದಿಲ್ಲ ಎಂದು ಸಂಭ್ರಮಿಸುತ್ತಾರೆ. ಒಂದು ಕಡೆ ಅರಿಹಂತರಾಗಿದ್ದ ಶ್ರೀ ಮಹಾವೀರ ಸ್ವಾಮಿಯ ಜೀವವು ಮುಕ್ತಿ ಹೊಂದಿದರೆ, ಅದೇ ದಿವಸ ಕೇವಲ ಜ್ಞಾನಜ್ಯೋತಿಯನ್ನು ಗೌತಮರು ಹೊಂದಿರುತ್ತಾರೆ. ಹಾಗಾಗಿ ಈ ಸ್ಮೃತಿಯಲ್ಲಿ ದೀಪಾವಳಿ ಪರ್ವವನ್ನು ಆಚರಿಸಲಾಗುತ್ತಿದೆ.

ಎಲ್ಲೆಡೆ ಈ ದಿವಸ ಮುಂಜಾನೆಯ (ಸುಪ್ರಭಾತ) ಬಸದಿಯಲ್ಲಿ ಚತುಃಸಂಘದೊಂದಿಗೆ ವಿಶೇಷ ಪೂಜೆ, ಅಭಿಷೇಕ ಕ್ರಿಯೆಗಳನ್ನು ಮಾಡಿ ನಿರ್ವಾಣ ಲಾಡು(ಲಡ್ಡು)ವನ್ನು ಏರಿಸುವ ಮೂಲಕ ಮುಕ್ತಿಗೊಡೆಯ ಭಗವಾನ ಶ್ರೀಮಹಾವೀರರನ್ನು ಸ್ಮರಿಸಿಕೊಳ್ಳುತ್ತಾರೆ. ಸಂಜೆ ಗೌತಮ ಗಣಧರರ ಪೂಜೆಯನ್ನು ಮಾಡಿ ಕೇವಲಜ್ಞಾನ (ಲಕ್ಷ್ಮೀ) ಪೂಜೆಯನ್ನು ಮಾಡುವುದು. ಬಸದಿಗಳಿಗೆ ದೀಪಾಲಂಕಾರ ಮಾಡುವುದು ಲೋಕ ವ್ಯವಹಾರ. ಇದೇ ದಿವಸ ಜೈನ ತ್ಯಾಗಿಗಳು ನಾಲ್ಕು ತಿಂಗಳ ಚಾತುರ್ಮಾಸ ವ್ರತವನ್ನು ವಿಸರ್ಜಿಸುವ ಮೂಲಕ ಬಂಧಮುಕ್ತರಾಗಿ ಮತ್ತೊಮ್ಮೆ ವಿಹಾರಕ್ಕೆ ಸಜ್ಜಾಗುತ್ತಾರೆ.

ಭಗವಾನ್ ಮಹಾವೀರರು ಸಾರಿದ ಅಹಿಂಸೆ, ಅನೇಂಕಾತವಾದ, ಸ್ಯಾದ್ವಾದ, ಅಪರಿಗ್ರಹ ತತ್ವಗಳು ಇಂದಿನ ವೇಗದ ಆಧುನಿಕ ಪ್ರಪಂಚಕ್ಕೆ ಹೆಚ್ಚು ಸೂಕ್ತವಾಗಿದೆ. ಬುದ್ಧರ ಮಹಾವೀರರ ಸಂದೇಶಗಳು ಸಾರ್ವಕಾಲಿಕವಾದುವು. ಎಲ್ಲೆಡೆ ಅಶಾಂತಿ, ಆತಂಕವಾದ, ಭಯ ತುಂಬಿರುವ ಪರಿಸರದಲ್ಲಿ ಮಹಾಪುರುಷರ ಸಂದೇಶಗಳು ಬಾಳಿಗೆ ಬೆಳಕು ನೀಡಬಲ್ಲವು. ಇಂತಹ ಪರ್ವ ದಿನಗಳು ನಮಗೆ ಪದೇ-ಪದೇ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತವೆ. ಧರ್ಮವೆಂಬುದು ಜೀವಿಯ ಕಲ್ಯಾಣಕ್ಕೆ ಕಾರಣವಾಗಿರುವುದು. ಹಬ್ಬಗಳು ಹೊಸ ಜನತೆಗೆ ಇತಿಹಾಸದ ಪರಿಚಯ ಮಾಡುವ ಶುಭಘಳಿಗೆ. ದೀಪಾವಳಿಯ ಬೆಳಕು ಎಲ್ಲೆಲೂ ಎಲ್ಲರಲೂ ಬೆಳಗುವಂತಾಗಲಿ.

ಪರಿವರ್ತನೆಯನ್ನು ಘಟನೆಯಂತೆ ನೋಡದೇ, ಒಂದು ಪ್ರಕ್ರಿಯೆ ರೀತಿಯಲ್ಲಿ ನೋಡಬೇಕು. ತನ್ನಲ್ಲಿ ತಾನು ಶೋಧಿಸಿಕೊಳ್ಳುವ ರೀತಿ. ಇದರಿಂದ ನಾವಲ್ಲದೇ ನಮ್ಮ ಸುತ್ತ-ಮುತ್ತ ಪರಿವರ್ತನೆಯಾಗುತ್ತದೆ. ಅನೇಕ ಪರಿಸ್ಥಿತಿಗಳಲ್ಲಿ ಮನುಷ್ಯ ಪರಿಸ್ಥಿತಿಯನ್ನು ವಿಪರೀತವಾಗಿ ತೆಗೆದುಕೊಳ್ಳುತ್ತಾನೆ. ಸಾಹಸದಿಂದ ಎದುರಿಸಿ ಅಭಿನ್ನನಾಗಿ ಬೆಳೆಯಲು ಆರಂಭಿಸಿದರೆ ಸಾಮಾನ್ಯ ಬೇಡನಾಗಿದ್ದ ಮಹಾವೀರನ ಹಿಂದಿನ ಜೀವವೇ ಮುಂದೇ ತೀರ್ಥಂಕರನಾಗಿ 'ಮನುಕುಲವ ಬೆಳಗುವ ನಂದಾದೀಪವಾಗಿ' ಬೆಳಗಿದನು. ದೀಪಾವಳಿ ನಮ್ಮನ್ನು ಬೆಳಗುವ ರೀತಿ ತೋರಿಸುತ್ತದೆ.ಕತ್ತಲೆಯ ಜೊತೆ ಸಂಘರ್ಷಿಸುವ ರೀತಿ ಕಲಿಸುತ್ತದೆ.

ನಮ್ಮ ಜೀವನದಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ, ಹೋಗುತ್ತವೆ. ನಮ್ಮ ಅಮೂಲ್ಯ ಕ್ಷಣಗಳು ನಮ್ಮ ಪ್ರಗತಿಗಾಗಿ, ಉನ್ನತಿಗಾಗಿ ಬಳಕೆಯಾದಾಗಲೇ ಜೀವನ ಬೆಳಗುತ್ತದೆ. ಎಣ್ಣೆ/ತುಪ್ಪದ ದೀಪಗಳು ಹೊರಗಿನ ಕತ್ತಲೆಯನ್ನು ದೂರಮಾಡಬಹುದು. ಅಂತರಾತ್ಮನ ಕತ್ತಲೆಯನ್ನು ದೂರಮಾಡಲು ನಮಗೆ ಸಮಯೋಚಿತವಾದ ವಿವೇಕ, ಜಾಗೃತಿ ಇಟ್ಟುಕೊಂಡರೆ ನಮ್ಮ ಬಾಳಲ್ಲಿ ನಿತ್ಯ ದೀಪಾವಳಿ ಸಂಭ್ರಮವಾಗುವುದರಲ್ಲಿ ದೂರವಿಲ್ಲ.

॥ ನಮ್ಮ ಜ್ಞಾನದೀಪ ನಮ್ಮನ್ನು ಬೆಳಗಿಸಲಿ ॥

ಬೆಳಕಿನಿಂದ ಬೆಳಕಿನೆಡೆಗೆ, ನಡೆ ಸಾಗಲಿ ನಿರಂತರ । ಮಾನವೀಯ ಮೌಲ್ಯಗಳು, ಬೆಳಗಲಿ ನಮ್ಮಲ್ಲಿ ನಿರಂತರ ।

## ಹೊಂಬುಜ ಶ್రೀಗಳ ಸಿಂಹಾಸನಾರೋಹಣ

## "ಜ್ಞಾನಪ್ರಭೆ ಬೆಳಗಿಸುವ ಅತಿಶಯ ಶ್ರೀಕ್ಷೇತ್ರ ಹೊಂಬುಜ ಪೀಠ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** "ಆಧ್ಯಾತ್ಮಿಕ ಪ್ರಭಾವನೆಯನ್ನು ಮನದಟ್ಟಾಗಿ ತಿಳಿಹೇಳುವ ಮೂಲಕ ಸಮಾಜದಲ್ಲಿ ಸಮಾನತೆ, ಸೌಹಾರ್ದತೆ ಪ್ರತಿಯೋರ್ವರಲ್ಲಿ ಕಾಣಬಹುದು. ಕಾಲಕಾಲಕ್ಕೆ ಜೈನ ಮುನಿಶ್ರೀಗಳವರು, ಹೊಂಬುಜದ ಪೂರ್ವ ಭಟ್ಟಾರಕರವರು ಜೈನಧರ್ಮದ ಆಚರಣೆಯ ವಿಚಾರಗಳನ್ನು ಪ್ರಸರಿಸಿ, ಸನ್ನಡತೆಯ ಸಮಾಜ ನಿರ್ಮಾಣಕ್ಕಾಗಿ ಪೂರಕ ಧರ್ಮ ತತ್ತ್ವಗಳನ್ನು ನಿರೂಪಿಸಿದ್ದಾರೆ" ಎಂದು ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ವಿಜಯದಶಮಿಯಂದು ಸಿಂಹಾಸನ ಪೂಜಾ ವಿಧಿಯ ಬಳಿಕ ಅನುಗ್ರಹ ಆಶೀರ್ವಾದ ಪ್ರವಚನದಲ್ಲಿ ತಿಳಿಸಿದರು.

"ಜ್ಞಾನಪ್ರಭೆ ಬೆಳಗಿಸುವ ಅತಿಶಯ ಶ್ರೀಕ್ಷೇತ್ರ ಹೊಂಬುಜ ಶ್ರೀಪೀಠವು ಸರ್ವತ್ರ ಮೈತ್ರಿಭಾವ ಜೀವನ ನಿರ್ವಹಣೆಗಾಗಿ ನಿರಂತರ ಮಾರ್ಗದರ್ಶನ ಮಾಡಿರುವುದು. ಪ್ರಸಕ್ತ ಸನ್ನಿವೇಶದಲ್ಲಿಯೂ ಸುಖ-ಸಂಪತ್ತು-ಆರೋಗ್ಯ-ಆದಾಯ ಸಂವರ್ಧನೆಗಾಗಿ ಧರ್ಮ ಸ್ಪರ್ಶವನ್ನು ನೀಡುತ್ತಿದೆ" ಎಂಬ ಶುಭ ಸಂದೇಶ ನೀಡಿದ ಶ್ರೀಗಳವರು **'ಸರ್ವರಿಗೂ ಕ್ಷೇಮವುಂಟಾಗಲಿ'** ಎಂದು ಹರಸಿ, ಶ್ರೀಫಲ ಮಂತ್ರಾಕ್ಷತೆ ದಯಪಾಲಿಸಿದರು. ಪುರೋಹಿತರಾದ ಪದ್ಮರಾಜ ಇಂದ್ರ, ಸಹಪುರೋಹಿತರು ಸಿಂಹಾಸನ ಪೂಜೆ, ಬಿರುದಾವಳಿ ವಾಚನ, ಪಾದಪೂಜೆ ನೆರವೇರಿಸಿದರು. ಭಕ್ತವೃಂದದವರು ಉಪಸ್ಥಿತರಿದ್ದರು.

## ವಿಜಯದಶಮಿಯಂದು ಬನ್ನಿಮಂಟಪದವರೆಗೆ ಶೋಭಾಯಾತ್ರೆ

## "ಬದುಕು ಬಂಗಾರವಾಗಲಿ, ಇಷ್ಟಾರ್ಥ ಪ್ರಾಪ್ತಿಗಾಗಿ ಧರ್ಮ ಪರಂಪರೆ ಶ್ರೀರಕ್ಷೆ ಆಗಿದೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** **"ಬದುಕು ಬಂಗಾರವಾಗಲಿ, ಇಷ್ಟಾರ್ಥ ಪ್ರಾಪ್ತಿಗಾಗಿ ಧರ್ಮ ಪರಂಪರೆ ಶ್ರೀರಕ್ಷೆ ಆಗಿದೆ ಎಂಬ ಸದ್ವಿಚಾರವನ್ನು ಅರಿತಾಗ ಯಶಃ ಪ್ರಾಪ್ತಿ ನಿಶ್ಚಿತ"** ಎಂದು ಹೊಂಬುಜ ಶ್ರೀ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಬನ್ನಿಮಂಟಪದಲ್ಲಿ ಬನ್ನಿ ಮರಕ್ಕೆ ಪೂಜೆ ಸಲ್ಲಿಸಿ, ಶ್ರೀ ಪದ್ಮಾವತಿ ದೇವಿ ವಿಧಿ-ವಿಧಾನ ಪೂಜೆ ಸಲ್ಲಿಸಿ ವಿಜಯದಶಮಿ ಧರ್ಮ ಸಂದೇಶ ನೀಡಿ, ಸರ್ವರಿಗೂ ಬನ್ನಿ ಪತ್ರ ನೀಡಿ ಹರಸಿದರು.

ಶ್ರೀಕ್ಷೇತ್ರದ ಸನ್ನಿಧಿಯಲ್ಲಿ ಸಾಲಂಕೃತ ಮೆರವಣಿಗೆಯಲ್ಲಿ ಗಜರಾಣಿ ಐಶ್ವರ್ಯ, ಅಶ್ವಗಳಾದ ಪವನ ಮಾನವಿ ಮತ್ತು ವಾದ್ಯಗೋಷ್ಠಿ, ಜಯಕಾರಗಳೊಂದಿಗೆ ಉತ್ಸವವು ಬನ್ನಿ ಮಂಟಪದತ್ತ ತೆರಳಿತು. ಊರಪರವೂರ ಭಕ್ತವೃಂದ, ಶ್ರೀ ಕುಂದಕುಂದ ಗುರುಕುಲ ವಿದ್ಯಾಪೀಠದ ವಿದ್ಯಾರ್ಥಿಗಳು, ಪದ್ಮಾವತಿ ಮಹಿಳಾ ಸಮಾಜದ ಶ್ರಾವಿಕೆಯರು ಶ್ರೀಗಳವರಿಂದ 'ಶಮೀ ಪತ್ರ' ಸ್ವೀಕರಿಸಿ ಧನ್ಯರಾದರು.

ವಿಜಯದಶಮಿ: ಸರ್ವಾಲಂಕಾರ ಪೂಜೆ ಸಮರ್ಪಣೆ

# "ಅಕ್ಷರಾಭ್ಯಾಸದಿಂದ ಸಮ್ಯಕ್‌ಜ್ಞಾನ ಸಂಪಾದನೆ, ಜೀವನ ಶಿಕ್ಷಣ ಧರ್ಮಪಥದಲ್ಲಿರಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ಶ್ರೀ ಮಹಾವೀರ ಶಕ ವರ್ಷ 2551ನೇ ಶ್ರೀ ವಿಶ್ವಾವಸು ನಾಮ ಸಂವತ್ಸರದ ವಿಜಯದಶಮಿ ಸುದಿನ ಪರ್ವಾಚರಣೆಯು ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಶ್ರೀ 1008 ಪಾರ್ಶ್ವನಾಥ ತೀರ್ಥಂಕರ ಹಾಗೂ ಅಧಿದೇವತೆ ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಜಿನಾಗಮೋಕ್ತ ಶಾಸ್ತ್ರದನ್ವಯ ವಿಧಿಪೂರ್ವಕ ನೆರವೇರಿತು. ಹೊಂಬುಜ ಶ್ರೀ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಶ್ರೀಕ್ಷೇತ್ರದ ಎಲ್ಲ ಜಿನಮಂದಿರಗಳಲ್ಲಿ ಅಷ್ಟವಿಧಾರ್ಚನೆ ಪೂಜೆಗಳು ಭಕ್ತರ ಪಾಲ್ಗೊಳ್ಳುವಿಕೆಯಿಂದ ವಾದ್ಯಗೋಷ್ಠಿ, ಜಿನಭಜನೆ, ಜಿನವಾಣಿ ಸ್ತೋತ್ರ ಸ್ತುತಿಸುವುದರೊಂದಿಗೆ ಭಕ್ತಿಭಾವಗಳಿಂದ ಜರುಗಿತು.

**"ವಿಜಯದಶಮಿಯಂದು ಮಕ್ಕಳ ಅಕ್ಷರಾಭ್ಯಾಸ ಓಂ ನಾಮದೊಂದಿಗೆ ಆರಂಭಿಸುವುದರಿಂದ ವಿದ್ಯಾಭ್ಯಾಸದಿಂದ ಉನ್ನತ ಸ್ಥಾನ-ಮಾನ-ಗೌರವ ಪ್ರಾಪ್ತಿಯಾಗಲಿದೆ"** ಎಂದು ಸ್ವಸ್ತಿಶ್ರೀಗಳವರು ವಿಜಯದಶಮಿ ಧರ್ಮ ಸಂದೇಶ ಪ್ರವಚನದಲ್ಲಿ ತಿಳಿಸಿದರು. **"ಅಕ್ಷರಾಭ್ಯಾಸದಿಂದ ಅಸ್ತ್ರ ಶಸ್ತ್ರಗಳಿಂತಲೂ ಪ್ರಭಾವೀ ಶೈಕ್ಷಣಿಕ ಅಕ್ಷರ ಅಸ್ತ್ರವೆಂದಾಗಬೇಕು. ಜೀವನದಲ್ಲಿ ದೇವ-ಗುರು-ಹಿರಿಯರಿಗೆ ಗೌರವ ಅರ್ಪಿಸಿ, ಸ್ಮರಿಸುತ್ತಾ ವೈಯುಕ್ತಿಕ ಸಾಧನೆ ಯಶಸ್ವಿಯಾಗಲಿ, ರಾಷ್ಟ್ರ ಸೇವಕರಾಗಿ ಜನ್ಮಭೂಮಿಯ ಕ್ಷೇಮಾಭ್ಯುದಯಕ್ಕಾಗಿ ನಿಸ್ವಾರ್ಥ ಸೇವೆ ಸಮರ್ಪಿಸಲು ವಿಜಯದಶಮಿಯಂದು ಪ್ರಾರ್ಥಿಸುವುದು ಸ್ತುತ್ಯಾರ್ಹವಾದುದು"** ಎಂದು ಶ್ರೀಗಳವರು ವಿವರಿಸಿದರು. ಭಕ್ತವೃಂದದವರಿಗೆ ಶ್ರೀಫಲ ಮಂತ್ರಾಕ್ಷತೆ ನೀಡಿದರು.

ಷೋಡೋಪಚಾರ ಪೂಜೆಯ ಬಳಿಕ ಅಕ್ಷರಾಭ್ಯಾಸವನ್ನು ಶ್ರೀಗಳವರು ಮಾಡಿಸಿದರು. ಪುರೋಹಿತರಾದ ಶ್ರೀ ಪದ್ಮರಾಜ ಇಂದ್ರ, ಸಹ ಪುರೋಹಿತರು ಪೂಜಾ ವಿಧಿಗಳನ್ನು ಪೂರ್ವ ಪರಂಪರೆಯಂತೆ ನೇರವೇರಿಸಿದರು.

ಪ್ರತಿದಿನ ಪ್ರಾತಃಕಾಲ ಕುಮುದ್ವತಿ ತೀರ್ಥದಿಂದ ಅಗ್ರೋದಕ ತರಲಾಗುತ್ತಿತ್ತು. ಶ್ರೀ ನೇಮಿನಾಥ ತೀರ್ಥಂಕರರು, ಶ್ರೀ ಮಹಾವೀರ ತೀರ್ಥಂಕರ, ಶ್ರೀ ಆದಿನಾಥ ತೀರ್ಥಂಕರ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಶ್ರೀ ಕ್ಷೇತ್ರಪಾಲ, ಶ್ರೀ ನಾಗಸನ್ನಿಧಿಯಲ್ಲಿ ಪೂಜಾ ವಿಧಿ-ವಿಧಾನಗಳು ಜರುಗಿದವು. ಶ್ರೀಮಠದ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ ನೇ. ಮಗುದುಮ್ಮ, ಆಡಳಿತಾಧಿಕಾರಿ ಸಿ.ಡಿ. ಅಶೋಕಕುಮಾರ ಹಾಗೂ ಶ್ರೀಮಠದ ಸೇವಾವರ್ಗದವರು ನವರಾತ್ರಿ ಮತ್ತು ವಿಜಯದಶಮಿ ಪರ್ವಾಚರಣೆ ಸಂದರ್ಭದಲ್ಲಿ ಭಕ್ತವೃಂದದವರಿಗೆ ಸಹಕಾರ ನೀಡಿದರು.

## 24ನೇ ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ




**ಬೆಂಗಳೂರು :** ಅಕ್ಟೋಬರ್ 05ರ ಬೆಳಿಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಸಾಲಿಗ್ರಾಮ ಜೈನಮಿತ್ರ ಮಂಡಳಿಯ 24ನೇ ವಾರ್ಷಿಕೋತ್ಸವವು ಜರುಗಿತು. ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ ಮಾಡಲು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಲ್.ಎನ್. ಮುಕುಂದರಾಜ್‌ರವರು ಆಗಮಿಸಿದ್ದರು.

ಡಾ. ಪದ್ಮರಾಜ ದಂಡಾವತಿ ಅವರಿಗೆ **'ಸುಮಾ ವಸಂತ'** ಪ್ರಶಸ್ತಿಯನ್ನು ಮತ್ತು ಶ್ರೀ ಚಿತ್ತ ಜಿನೇಂದ್ರ ಅವರಿಗೆ **'ಶ್ರೇಯೋಭದ್ರ'** ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಡಾ. ಪದ್ಮರಾಜ ದಂಡಾವತಿಯವರು ಜೈನ ಧರ್ಮ 63 ಒಳನೋಟಗಳು ಕೃತಿಯ ಬಗ್ಗೆ ಮಾತನಾಡಿದರು. ವಿಶ್ವದಲ್ಲಿ ಇಂದು ಜೈನ ಧರ್ಮದ ಪ್ರಸ್ತುತತೆ ಎಂಬ ವಿಷಯದ ಬಗ್ಗೆ ಡಾ. ಅಜಿತ್ ಮುರುಗುಂಡೆ ಉಪನ್ಯಾಸ ನೀಡಿದರು.

ಡಾ. ನೀರಜಾ ನಾಗೇಂದ್ರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಡಾ. ಪದ್ಮಿನಿ ನಾಗರಾಜ ಪ್ರಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಧೀರಜ್ ಜೈನ್ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ರತ್ನತ್ರಯ ಧಾರವಾಹಿಯಲ್ಲಿ ಪ್ರಸಾರವಾದ ಕಿರಿಚಿತ್ರ ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ರತ್ನತ್ರಯ ಧಾರವಾಹಿಯ ನಿರ್ಮಾಪಕ, ನಿರ್ದೇಶಕರಾದ ಡಾ. ನೀರಜಾ ನಾಗೇಂದ್ರಕುಮಾರ್‌ರವರು ಬಹುಮಾನ ನೀಡಿದರು.

**ಜಿನ-ದನಿ**

**ಜೋದೇಹಣಿರವೇಕ್ಖೋಣಿಮಮೋಣಿರಾರಂಭೋ ।**
**ಆದಾ ಸಹಾವೇ ಸುರಓಜೋ ಇ ಸೋ ಲಹಇ ಣಿವ್ವಾಣಂ ॥**

ಅರ್ಥ:-ಯಾರು ಶರೀರದ ಬಗ್ಗೆ ನಿರಪೇಕ್ಷರು, ದ್ವಂದ್ವರಹಿತರು, ಮಮತೆರಹಿತರು, ಆರಂಭರಹಿತರು ಹಾಗೂ ಆತ್ಮಸ್ವಭಾವದಲ್ಲಿ ಸಂಲಗ್ನರೂಇಂತಹಯೋಗಿಯೂ ನಿರ್ವಾಣ ಹೊಂದುತ್ತಾರೆ. ಆದರೆದ್ವಂದ್ವಯುಕ್ತ ಸಾಧಕಆತ್ಮಜ್ಞಾನ ಶೂನ್ಯರೆಂದು ಭಾವವು.

## ಬರಲಿರುವ ಪರ್ವದಿನಗಳು

ವಿಶ್ವಾವಸುನಾಮ ಸಂವತ್ಸರದ

ಆಶ್ವೀಜಮಾಸ ಕೃಷ್ಣಪಕ್ಷ ಏಕಾದಶಿಯಿಂದ ಕಾರ್ತೀಕಮಾಸ ಕೃಷ್ಣಪಕ್ಷ ದ್ವಾದಶಿಯವರೆಗೆ

**ಆಶ್ವೀಜ ಮಾಸ**

ಅ. 17 ಶುಕ್ರ-ಏಕಾದಶಿ-ಮಘಾ
ಅ. 18 ಶನಿ-ದ್ವಾದಶಿ-ಪೂರ್ವಾ
ಅ. 19 ಭಾನು-ತ್ರಯೋದಶಿ-ಉತ್ತರ
**ಅ. 20 ಸೋಮ-ಚತುರ್ದಶಿ-ಹಸ್ತ, ನರಕ ಚತುರ್ದಶಿ.**
**ಅ. 21 ಮಂಗಳ-ಅಮವಾಸ್ಯೆ-ಚಿತ್ತಾ, ದೀಪಾವಳಿ ಅಮವಾಸ್ಯೆ,**

**ಕಾರ್ತಿಕ ಮಾಸ**

**ಅ. 22 ಬುಧ-ಪ್ರತಿಪದ-ಸ್ವಾತಿ, ದೀಪಾವಳಿ**
ಅ. 23 ಗುರು-ಬಿದಿಗೆ-ವಿಶಾಖ
ಅ. 24 ಶುಕ್ರ-ತದಿಗೆ-ಅನುರಾಧ
ಅ. 25 ಶನಿ-ಚತುರ್ಥಿ-ಅನುರಾಧ
ಅ. 26 ಭಾನು-ಪಂಚಮಿ-ಜ್ಯೇಷ್ಠಾ
ಅ. 27 ಸೋಮ-ಪಂಚಮಿ-ಮೂಲ
ಅ. 28 ಮಂಗಳ-ಷಷ್ಠಿ-ಪೂ.ಷಾಢ
ಅ. 29 ಬುಧ-ಸಪ್ತಮಿ-ಉ.ಭಾ.
ಅ. 30 ಗುರು-ಅಷ್ಟಮಿ-ಶ್ರವಣ
ಅ. 31 ಶುಕ್ರ-ನವಮಿ-ಧನಿಷ್ಠಾ
ನ. 01 ಶನಿ-ದಶಮಿ-ಶತಭಿಷಾ
ನ. 02 ಭಾನು-ಏಕಾದಶಿ-ದ್ವಾದಶಿ-ಪೂ.ಭಾ.
ನ. 03 ಸೋಮ-ತ್ರಯೋದಶಿ-ಉ.ಭಾದ್ರ
ನ. 04 ಮಂಗಳ-ಚತುರ್ದಶಿ-ರೇವತಿ
ನ. 05 ಬುಧ-ಹುಣ್ಣಿಮೆ-ಅಶ್ವಿನಿ
ನ. 06 ಗುರು-ಪ್ರತಿಪದ-ಭರಣಿ-ಕೃತ್ತಿಕಾ
ನ. 07 ಶುಕ್ರ-ಬಿದಿಗೆ-ರೋಹಿಣಿ
ನ. 08 ಶನಿ-ತದಿಗೆ-ಚತುರ್ಥಿ-ಮೃಗಶಿರಾ
**ನ. 09 ಭಾನು-ಪಂಚಮಿ-ಆರಿದ್ರಾ, ಶ್ರೀಕ್ಷೇತ್ರ ಹೊಂಬುಜದಲ್ಲಿ ಲಕ್ಷದೀಪೋತ್ಸವ**
**ನ. 10 ಸೋಮ-ಷಷ್ಠಿ-ಪುನರ್ವಸು, ಹೊಂಬುಜ ಶ್ರೀಗಳವರ ಪಟ್ಟಾಭಿಷೇಕ ವರ್ಧಂತ್ಯೋತ್ಸವ.**
ನ. 11 ಮಂಗಳ-ಸಪ್ತಮಿ-ಪುಷ್ಯ
ನ. 12 ಬುಧ-ಅಷ್ಟಮಿ-ಆಶ್ಲೇಷಾ
ನ. 13 ಗುರು-ನವಮಿ-ಮಘಾ
ನ. 14 ಶುಕ್ರ-ದಶಮಿ-ಪೂರ್ವಾ
ನ. 15 ಶನಿ-ಏಕಾದಶಿ-ಉತ್ತರ
ನ. 16 ಭಾನು-ದ್ವಾದಶಿ-ಹಸ್ತ

WWW.HOMBUJAPADMAVATI.ORG

## ಹಾಸನದ ಶ್ರೀ ಮಹಾವೀರ ಎಜುಕೇಷನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ವಿದ್ಯಾರ್ಥಿ ವೇತನ

**ಹೊಂಬುಜ :** ಜೈನಮಠದ ಪೀಠಾಧ್ಯಕ್ಷರಾಗಿರುವ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು, ಟ್ರಸ್ಟಿನ ಗೌರವಾನ್ವಿತ ಪರಮಸಂರಕ್ಷಕರು ಹಾಗೂ ಅಧ್ಯಕ್ಷರು ಆಗಿರುವ ಹಾಸನದ ಶ್ರೀ ಮಹಾವೀರ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಈ ವರ್ಷವೂ 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಕರ್ನಾಟಕ ರಾಜ್ಯ ಜೈನ ಸಮಾಜದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ವಿದ್ಯಾರ್ಥಿ ವೇತನಕ್ಕೋಸ್ಕರ ಅರ್ಜಿ ಆಹ್ವಾನಿಸಿದೆ.

ಇದು ವೈದ್ಯಕೀಯ, ದಂತವೈದ್ಯಕೀಯ, ಆಯುರ್ವೇದ, ಹೋಮಿಯೋಪತಿ, ಇಂಜಿನಿಯರಿಂಗ್, ಡಿಪ್ಲೋಮಾ ಮತ್ತು ಜೈನಾಲಜಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುವುದು. ಅರ್ಹವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಿಂದಿನ ಪರೀಕ್ಷೆಯಲ್ಲಿ ಗಳಿಸಿರುವ ಅಂಕಪಟ್ಟಿ ನಕಲು, ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಪ್ರವೇಶ ಪತ್ರದ ನಕಲು ಹಾಗೂ ಆಧಾರ್‌ಕಾರ್ಡಿನ ಪ್ರತಿ ಹಾಗೂ ತಮ್ಮ ಬ್ಯಾಂಕಿನ ವಿವರದೊಂದಿಗೆ ಅರ್ಜಿಯನ್ನು P.D.F Format ನಲ್ಲಿ ಈ ಇಮೇಲ್ ವಿಳಾಸ mahaveeraeducationaltrust@gmail.com ಅಥವಾ ವಾಟ್ಸಾಪ್ ನಂ-9448544333 ಗೆ ದಿನಾಂಕ 15/11/2025ರ ಒಳಗಾಗಿ ಕಳುಹಿಸುವಂತೆ ಟ್ರಸ್ಟ್‌ನ ವಿದ್ಯಾರ್ಥಿ ವೇತನ ಸಮಿತಿಯ ಸಂಚಾಲಕರಾದ ಜಯೇಂದ್ರಕುಮಾರ್ ಹೆಚ್.ಡಿ. ರವರು ತಿಳಿಸಿರುತ್ತಾರೆ.

ಶರನ್ನವರಾತ್ರಿ ಧಾರ್ಮಿಕ ವಿಧಿ-ವಿಧಾನ - ಘಟಸ್ಥಾಪನೆ

# "ಸುಶೋಭಿತ ಅಭೀಷ್ಟವರಪ್ರದಾಯಿನಿ ಹರಸಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.22):** **"ಸರ್ವರಿಗೂ ಅಭೀಷ್ಟವರಪ್ರದಾಯಿನಿ ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸದಾ ಹರಸಲಿ"** ಎಂದು ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಜಿಗಳವರು ಭಕ್ತರನ್ನು ಆಶೀರ್ವದಿಸಿದರು. ಪರಮಪೂಜ್ಯ ಶ್ರೀಗಳವರ ನೇತೃತ್ವ, ಸಾನಿಧ್ಯ ಹಾಗೂ ಉಪಸ್ಥಿತಿಯಲ್ಲಿ ಆಗಮೋಕ್ತ ಶಾಸ್ತ್ರದನ್ವಯ ಶರನ್ನವರಾತ್ರಿಯ ಪ್ರಥಮ ದಿನದ ಪೂಜಾ ವಿಧಿವಿಧಾನಗಳು ನೆರವೇರಿದವು. ಶ್ರೀಕ್ಷೇತ್ರದ ಬಸದಿಗಳ ಆಕರ್ಷಕ ವಿದ್ಯುತ್ ದೀಪಾಲಂಕಾರವು ಎಲ್ಲರ ಗಮನ ಸೆಳೆಯುವಂತಿತ್ತು.

### ಶರನ್ನವರಾತ್ರಿ ಪರ್ವಾಚರಣೆ - ದ್ವಿತೀಯ ದಿನ

## "ಶ್ರೀ ಭೈರವ ಪದ್ಮಾವತಿ ದೇವಿ ಆರಾಧನೆಯ ಸತ್ಫಲ ಲಭಿಸಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ. 23):** ಅತಿಶಯ ಶ್ರೀಕ್ಷೇತ್ರ ಹೊಂಬುಜ ಶ್ರೀ 1008 ಪಾರ್ಶ್ವನಾಥ ತೀರ್ಥಂಕರರ ಮತ್ತು ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಶರನ್ನವರಾತ್ರಿ ದ್ವಿತೀಯ ದಿನದ ಪೂಜಾ ವಿಧಿ-ವಿಧಾನಗಳು ಆಗಮೋಕ್ತ ಶಾಸ್ತ್ರದನ್ವಯ ನೆರವೇರಿತು. ಊರ ಪರವೂರ ಭಕ್ತರು ಶ್ರೀ ಭೈರವ ಪದ್ಮಾವತಿ ದೇವಿ ಆರಾಧನೆಯಲ್ಲಿ ಪಾಲ್ಗೊಂಡರು.

**"ಶ್ರೀ ಭೈರವ ಪದ್ಮಾವತಿ ಆರಾಧನೆಯಿಂದ ಲೋಕಕಲ್ಯಾಣ ಹಾಗೂ ಭಕ್ತವೃಂದದವರಿಗೆ ಸತ್ಫಲ ಲಭಿಸಲಿ"** ಎಂದು ಸ್ವಸ್ತಿಶ್ರೀಗಳವರು ಪ್ರವಚನದಲ್ಲಿ ತಿಳಿಸಿದರು. ಕ್ಲೇಶರಹಿತ ಸಮಾಜ ನಿರ್ಮಾಣವು ಧಾರ್ಮಿಕ ಮನೋಧರ್ಮವನ್ನು ಪ್ರತಿಯೋರ್ವರಲ್ಲಿ ನೆಲೆಗೊಳಿಸುವುದೆಂದರು.

### ಶರನ್ನವರಾತ್ರಿ ಪರ್ವಾಚರಣೆ - ತೃತೀಯ ದಿನ

## "ಮುತ್ತಿನಂತೆ ಧರ್ಮಪ್ರಜ್ಞೆ ಪ್ರತಿಫಲಿಸಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ. 24):** ಮುತ್ತಿನ ಸರ್ವಾಲಂಕಾರಭೂಷಿತ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪುಷ್ಪ-ಫಲ-ನೈವೇದ್ಯ ಸಮರ್ಪಿಸಿ, ಭಕ್ತವೃಂದದವರು ಧನ್ಯತಾಭಾವ ತಳೆದರು.

**"ಮುತ್ತಿನಂತೆ ಪ್ರತಿಯೋರ್ವರ ಅಂತರಂಗದಲ್ಲಿ ಧರ್ಮಪ್ರಜ್ಞೆ ಪ್ರೇರಣೆ ನೀಡುವಂತಾಗಲಿ"** ಎಂದು ಸ್ವಸ್ತಿಶ್ರೀಗಳವರು ಪ್ರವಚನದಲ್ಲಿ ತಿಳಿಸಿದರು. **"ಕಲ್ಮಶರಹಿತ, ನಿರ್ವಿಕಾರಭಾವದ ಮನೋಭಾವವನ್ನು ರೂಢಿಸಿಕೊಂಡು ಸುಲಲಿತ ಜೀವನ ನಿರ್ವಹಣೆ ಮಾಡುವಂತಾಗಲಿ"** ಎಂಬ ಆಶೀರ್ವಾದದೊಂದಿಗೆ ಭಕ್ತರನ್ನು ಹರಸಿ, ಶ್ರೀಫಲ ಮಂತ್ರಾಕ್ಷತೆ ನೀಡಿದರು.

### ಶರನ್ನವರಾತ್ರಿ ಪರ್ವಾಚರಣೆ - ಚತುರ್ಥ ದಿನ

## "ನಿರ್ಮಲ ಭಕ್ತಿಯ ಫಲ ಸಮರ್ಪಣೆಯಿಂದ ಪ್ರಕೃತಿಯ ಆರಾಧನೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ. 25):** **"ಶರನ್ನವರಾತ್ರಿಯ ಪರ್ವವು ಭಾರತೀಯ ಧರ್ಮ ಪರಂಪರೆಯಲ್ಲಿ ವಿಶಿಷ್ಟವಾದುದು. ಪ್ರಕೃತಿಯ ಆರಾಧನೆಯ ಸಂಸ್ಕೃತಿ ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿತ್ತು"** ಎಂದು ಮಹಾಸ್ವಾಮಿಗಳವರು ಪ್ರವಚನದಲ್ಲಿ ಜೈನಧರ್ಮ ಪರಂಪರೆಯಲ್ಲಿ ಜಿನವಾಣಿ ಪೂಜೆ ಮತ್ತು ಪ್ರಕೃತಿಯ ಫಲ-ಪುಷ್ಪ ಸಮರ್ಪಣೆಯ ಐತಿಹ್ಯವನ್ನು ವಿವರಿಸಿದರು. **"ಸಾತ್ವಿಕ ಆಹಾರ ಸೇವನೆಯಿಂದ ಶಾರೀರಿಕ ಮತ್ತು ಮಾನಸಿಕವಾಗಿ ಸಧೃಡವಾಗಿ ಜೀವನೋತ್ಸಾಹವು ಸದಾ ಕರ್ತವ್ಯ ನಿರ್ವಹಿಸಲು ಪ್ರೇರೇಪಿಸುತ್ತದೆ"** ಎಂದು ಭಕ್ತರನ್ನು ಆಶೀರ್ವದಿಸಿ, ಶ್ರೀಫಲ ಮಂತ್ರಾಕ್ಷತೆ ನೀಡಿದರು.

WWW.HOMBUJAPADMAVATI.ORG

### ಶರನ್ನವರಾತ್ರಿ ಪರ್ವಾಚರಣೆ - ಐದನೇಯ ದಿನ

## "ಸಹಸ್ರನಾಮ ದೇವರ ಸ್ತುತಿ ಲಕ್ಷಹೂವಿನ ಪೂಜೆ ಸಮರ್ಪಣೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ. 26):** ಶರನ್ನವರಾತ್ರಿಯ ಐದನೇಯ ದಿನ ಭಕ್ತರು ಶ್ರೀ ಪದ್ಮಾವತಿ ದೇವಿ ಸಹಸ್ರನಾಮ ಸ್ತುತಿಸಿ, ಪ್ರಾರ್ಥನೆ ಸಲ್ಲಿಸಿದರು. ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು **"ದೇವರ ಸಹಸ್ರನಾಮ ಸ್ತುತಿಸುವುದರಿಂದ ಆಧ್ಯಾತ್ಮಿಕ ಸತ್‌ಪರಿಣಾಮವು ಶಾಂತಿ-ನೆಮ್ಮದಿಯನ್ನುಂಟು ಮಾಡುವುದು. ಉತ್ತಮ ಭಾವನೆಗಳು ಜೀವನದ ಕಷ್ಟ, ದುಃಖಗಳನ್ನು ನಿವಾರಿಸಿ, ಧನಾತ್ಮಕ ಚಿಂತನದತ್ತ ಪ್ರೇರೇಪಿಸುವುದು"** ಎಂದು ತಿಳಿಸುತ್ತಾ, ಭಕ್ತರನ್ನು ಹರಸಿ, ಶ್ರೀಫಲ ಮಂತ್ರಾಕ್ಷತೆ ನೀಡಿದರು.

ಸೇವಾಕರ್ತರಾದ ಗುಡಗಾಂವ್‌ನ ಶ್ರೀಮತಿ ನೀತು ಶ್ರೀ ನವೀನ್ ಜೈನ್ ಪೂಜಾ ವಿಧಾನಗಳಲ್ಲಿ ಭಾಗವಹಿಸಿದ್ದರು.



### ಶರನ್ನವರಾತ್ರಿ ಪರ್ವಾಚರಣೆ - ಆರನೇಯ ದಿನ

## "ವರ್ಣವೈಭವ ವಸ್ತ್ರಾಲಂಕಾರ ಶೋಭಿತ ಅಭೀಷ್ಟವರಪ್ರದಾಯಿನಿ ಸರ್ವರ ರಕ್ಷಕಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.27):** ಮಹಾತಾಯಿ ಯಕ್ಷಿಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ವಿಶೇಷ ಜಿನಾಗಮೋಕ್ತ ಪೂಜಾ ವಿಧಾನಗಳು ಭಕ್ತರ ಭಕ್ತಿಯ ಪುಷ್ಪ-ಫಲ ಸಮರ್ಪಣೆ ಮೂಲಕ ನಡೆಯಿತು.

**"ಭಕ್ತರು ತ್ರಿಕರಣಪೂರ್ವಕ ಸಮರ್ಪಿಸುವ ವರ್ಣರಂಜಿತ ವಸ್ತ್ರಗಳು (ಸೀರೆ) ಅಭೀಷ್ಟವರಪ್ರದಾಯಿನಿ ಯಕ್ಷಿಶ್ರೀ ಪದ್ಮಾವತಿ ದೇವಿ ಸ್ವೀಕರಿಸಿ, ಸರ್ವ ಭಕ್ತರ ರಕ್ಷಕಿಯಾಗಿ ಹರಸಲಿ"** ಎಂದು ಪರಮಪೂಜ್ಯ ಶ್ರೀಗಳವರು ಭಕ್ತರಿಗೆ ಶ್ರೀಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಷೋಡಶೋಪಚಾರ ಪೂಜಾ ವಿಧಿಯಲ್ಲಿ ಜಿನಸ್ತುತಿ ಸ್ತುತಿಸುತ್ತಾ ಭಕ್ತವೃಂದದವರು ಧನ್ಯರಾದರು.

### ಶರನ್ನವರಾತ್ರಿ ಪರ್ವಾಚರಣೆ - ಸಪ್ತಮ ದಿನ

## "ನವರಾತ್ರಿ ಆರಾಧನೆಯಿಂದ ಸಮೃದ್ಧ ಮಳೆ, ಬೆಳೆಗಾಗಿ ಪ್ರಾರ್ಥನೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.28):** ನವರಾತ್ರಿ ಉತ್ಸವದ ಸಪ್ತಮ ದಿನದಂದು ವಿವಿಧ ಧಾನ್ಯಗಳನ್ನು ಭಕ್ತರು ಸಮರ್ಪಿಸಿದರು. **"ನಾವು ಬೆಳೆಯುವ ಕೃಷಿ ಉತ್ಪಾದನೆಗಳು ಶಾರೀರಿಕವಾಗಿ ಆಹಾರ ದ್ರವ್ಯವಾಗಿದ್ದರೂ, ಪಂಚಭೂತಗಳ ವಿಲೀನದಿಂದ ಸಾತ್ವಿಕವಾಗಿ ಪೌಷ್ಟಿಕಾಂಶಗಳು ವ್ಯಾಧಿರಹಿತವಾಗಿ ಬಾಳಲು ಅವಶ್ಯವಾಗಿದೆ"** ಎಂದು ಶ್ರೀಗಳವರು ಪ್ರವಚನದಲ್ಲಿ **"ನವರಾತ್ರಿ ಉತ್ಸವ, ಆರಾಧನೆಯು ಸಮೃದ್ಧ ಮಳೆ, ಬೆಳೆಗಾಗಿ ಅಪೇಕ್ಷಿಸುವ ಧರ್ಮ ಮರ್ಮವನ್ನು ಹೊಂದಿದೆ"** ಎಂಬ ಅಂಶವನ್ನು ಪೂಜ್ಯಶ್ರೀಗಳವರು ತಿಳಿಸಿದರು

### ಶರನ್ನವರಾತ್ರಿ ಪರ್ವಾಚರಣೆ - ಸರಸ್ವತಿ ದೇವಿ ಆರಾಧನೆ

## "ಶ್ರೀ ಸರಸ್ವತಿ ದೇವಿ ಅನುಗ್ರಹದಿಂದ ಉನ್ನತ ಶಿಕ್ಷಣ ಪ್ರಾಪ್ತಿಯಾಗಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.29):** **"ಶ್ರೀ ಸರಸ್ವತಿ ದೇವಿ ಪ್ರತಿಯೋರ್ವರ ವಿದ್ಯಾಭ್ಯಾಸದ ಅಭ್ಯುದಯಕ್ಕೆ ಸದಾ ಹರಸುವ ವಿದ್ಯಾದೇವತೆ. ನವರಾತ್ರಿಯಲ್ಲಿ ಸರಸ್ವತಿ ಶ್ರೀ ಶಾರದಾ ಮಾತೆಯ ಸ್ತೋತ್ರ ಪಠಣದಿಂದ ಪ್ರಕೃತ್ತಿದತ್ತ ಫಲ-ಪುಷ್ಪಗಳಿಂದ ಹಾಗೂ ನವಿಲು ಗರಿಗಳಿಂದ ಅಲಂಕರಿಸುವುದು ಪ್ರಾಚೀನ ಪರಂಪರೆಯಾಗಿದೆ"** ಎಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಶ್ರೀಸರಸ್ವತಿ ದೇವಿ ಪೂಜಾ ಸಂದರ್ಭದಲ್ಲಿ ತಿಳಿಸಿದರು. **"ನಮ್ಮೆಲ್ಲರ ಇಷ್ಟಾರ್ಥ ನೆರವೇರಿಸಲು ಶ್ರೀ ಸರಸ್ವತಿ ದೇವಿ ಉತ್ತಮ ವಿದ್ಯೆಯನ್ನೀಡಲೆಂದು ಪ್ರಾರ್ಥಿಸುವುದು ಔಚಿತ್ಯಪೂರ್ಣವಾಗಿದೆ. ಉತ್ತಮ ಸಂಸ್ಕಾರದ ಶಿಕ್ಷಣ ಪಡೆದು ರಾಷ್ಟ್ರ ಸೇವಕರಾಗಲು ಶ್ರೀಮಾತೆ ಹರಸಲಿ"** ಎಂದು ಶ್ರೀಗಳವರು ಆಶೀರ್ವದಿಸಿದರು.

### ಶರನ್ನವರಾತ್ರಿ ಪರ್ವಾಚರಣೆ - ಜೀವದಯಾಷ್ಟಮಿ

## "ಸಕಲ ಜೀವರಾಶಿಗಳಲ್ಲಿ ಜೀವಕಾರುಣ್ಯಭಾವ ತೋರುವುದೇ ಜೈನ ಧರ್ಮದ ಉಪದೇಶಾಮೃತ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.30):** ಸಪ್ತವರ್ಣಗಳ ಬಳೆಗಳಿಂದ ಯಕ್ಷಿ ಶ್ರೀ ಪದ್ಮಾವತಿ ದೇವಿಯ ಶೃಂಗಾರವು ಭಕ್ತವೃಂದದವರನ್ನು ಮಂತ್ರಮುಗ್ಧಗೊಳಿಸುವಂತೆ ಶರನ್ನವರಾತ್ರಿ ಪರ್ವದ ಎಂಟನೇಯ ದಿನದಂದು ಆಯೋಜಿಸಲಾಗಿತ್ತು.

4ನೇ ಪುಟಕ್ಕೆ

## ಶರನ್ನವರಾತ್ರಿ ಪರ್ವಾಚರಣೆ – ಜೀವದಯಾಷ್ಟಮಿ

3ನೇ ಪುಟದಿಂದ

"ನವರಾತ್ರಿಯ ಎಂಟನೇಯ ದಿನವನ್ನು ಜೈನ ಧರ್ಮಶಾಸ್ತ್ರದನ್ವಯ ಜೀವದಯಾಷ್ಟಮಿ ಎಂಬುದಾಗಿ ವಿಶೇಷ ಮಹತ್ವವನ್ನು ನೀಡಲಾಗಿದೆ" ಎಂದ ಸ್ವಸ್ತಿಶ್ರೀಗಳವರು ಸರ್ವ ಜೀವರಾಶಿಗಳಲ್ಲಿ ಕಾರುಣ್ಯಭಾವ ತೋರುವ ಅಹಿಂಸಾ ಧರ್ಮದ ಮರ್ಮವನ್ನು ವಿವರಿಸಿದರು. "ಪ್ರತಿಯೋರ್ವರೂ ಪ್ರಾಣಿ, ಪಕ್ಷಿ,ಮರ-ಗಿಡಗಳನ್ನು ಸಂರಕ್ಷಿಸುವಂತಾಗಬೇಕು. ಶ್ರೀ ಪದ್ಮಾವತಿ ದೇವಿಗೆ ಸಮರ್ಪಿಸಿದ ಬಳೆಗಳು ಸುರಕ್ಷಾ ಕವಚದಂತೆ ರಕ್ಷಣೆ ಮಾಡುವ ಧರ್ಮಸಂದೇಶವನ್ನು ಸಾರುತ್ತದೆ" ಎಂದು ಭಕ್ತರನ್ನುದ್ದೇಶಿಸಿ ತಿಳಿಸಿದರು. ಶ್ರೀಫಲ ಮಂತ್ರಾಕ್ಷತೆ ನೀಡಿ ಹರಸಿದರು.

## ಶರನ್ನವರಾತ್ರಿ ಉತ್ಸವ – ಮಹಾನವಮಿ ಪೂಜೆ

# "ನವಧಾ ಭಕ್ತಿ ಸಮರ್ಪಣೆಯಿಂದ ನವಚೈತನ್ಯ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.01):** ಒಂಬತ್ತು ದಿನಗಳ ಪರ್ಯಂತ ನಿತ್ಯಪೂಜೆ ವಿಧಿ ಸಹಿತ ಫಲ-ಪುಷ್ಪ-ದ್ರವ್ಯ-ವಿಶೇಷ ನೈವೇದ್ಯ ಅರ್ಪಿಸುವ ಮೂಲಕ ಧಾರ್ಮಿಕ ಹಿನ್ನೆಲೆಯನ್ನು ಭಕ್ತವೃಂದದವರು ಮನನ ಮಾಡುವಂತಾಯಿತು. ಸ್ವಸ್ತಿಶ್ರೀಗಳವರು **"ನವರಾತ್ರಿ ಪರ್ವವು ಆತ್ಮೋನ್ನತಿಗಾಗಿ ದೇವರ ಧ್ಯಾನ, ಸ್ವಾಧ್ಯಾಯ, ಸ್ತೋತ್ರ ಸ್ತುತಿಸುವುದು, ಸಂಗೀತ, ನಾಟ್ಯ ವಾದ್ಯಗೋಷ್ಠಿಗಳೊಂದಿಗೆ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡಾಗ, ಸರ್ವೋಲ್ಲಾಸದ ಜೀವನ ಪಥದಲ್ಲಿ ಸಾಧನೆ ಮಾಡಲು ಸಾಧ್ಯ"** ಎಂದು ವಿವರಿಸುತ್ತಾ, **"ಸಾಮೂಹಿಕ ಪ್ರಾರ್ಥನೆ-ಪೂಜೆಗಳಿಂದ ಕಲ್ಮಶರಹಿತ ಮನೋಭಾವವು ಚೈತನ್ಯ ನೀಡುತ್ತದೆ. ಇದು ದಿವ್ಯೌಷಧ"** ಎಂದು ಭಕ್ತರನ್ನು ಹರಸಿ, ಶ್ರೀಫಲ ಮಂತ್ರಾಕ್ಷತೆ ನೀಡಿದರು.

WWW.HOMBUJAPADMAVATI.ORG

## ಆಯುಧಪೂಜಾ ವಿಧಿ

ಶ್ರೀಕ್ಷೇತ್ರದ ಜೈನ ಮಠದ ವಾಹನ, ಶಾಲಾ ಮಕ್ಕಳ ವಾಹನ, ಕೃಷಿ ಯಂತ್ರೋಪಕರಣಗಳ ಪೂಜೆಯನ್ನು ಶ್ರೀಗಳವರ ಸಾನಿಧ್ಯದಲ್ಲಿ ನೆರವೇರಿಸಲಾಯಿತು. ಶ್ರೀ ಕ್ಷೇತ್ರ ಗಜರಾಣಿ ಐಶ್ವರ್ಯ, ಅಶ್ವಗಳಾದ ಪವನ, ಮಾನವಿ, ಚೇತಕ್ ಅಶ್ವಗಳನ್ನು ಶೃಂಗರಿಸಲಾಗಿತ್ತು.



## ಗೋವರ್ಧನ ಟ್ರಸ್ಟ್‌ನ ಗೋಮಾತೆ ಸೇವೆಗೆ ಹೊಂಬುಜ ಜೈನ ಮಠದ ಶ್ರೀಗಳ ಶ್ಲಾಘನೆ



**ಶಿವಮೊಗ್ಗ :** ಗೋವರ್ಧನ ಟ್ರಸ್ಟ್ ಶಿವಮೊಗ್ಗ ವತಿಯಿಂದ ಗೊಂದಿಚಟ್ನಿಹಳ್ಳಿಯಲ್ಲಿ ಗೋಮಾತೆಗಾಗಿ ಮೇವು ಬೆಳೆಯುವ ಕಾರ್ಯಕ್ರಮದ ಭೂಮಿ ಪೂಜೆಯನ್ನು ಶ್ರೀಕ್ಷೇತ್ರ ಹೊಂಬುಜ ದಿಗಂಬರ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ತಮ್ಮ ಅಮೃತ ಹಸ್ತದಿಂದ ಬೀಜ ಬಿತ್ತುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಶ್ರೀಗಳವರು ಕೆ.ಎಸ್. ಈಶ್ವರಪ್ಪ, ಕೆ.ಈ. ಕಾಂತೇಶ್ ನೇತೃತ್ವದ ಗೋವರ್ಧನ ಟ್ರಸ್ಟ್ ಗೋ ಮಾತೆಯನ್ನು ಉಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವುದು ನಿಜಕ್ಕೂ ಅನುಕರಣೀಯ ಕಾರ್ಯ ಎಂದು ಶ್ಲಾಘಿಸಿದರಲ್ಲದೇ, ಗೋವರ್ಧನ ಟ್ರಸ್ಟ್ ವತಿಯಿಂದ ಗೊಂದಿಚಟ್ನಿಹಳ್ಳಿಯಲ್ಲಿ ಗೋಮಾತೆಗಾಗಿ ಮೇವು ಬೆಳೆಯುವ ಕಾರ್ಯವನ್ನು ಮೆಚ್ಚಿ ಮಠದ ವತಿಯಿಂದ ಎರಡು ಲಕ್ಷ ರೂ. ಗಳನ್ನು ದೇಣಿಗೆಯಾಗಿ ಪೂಜ್ಯರು ಅರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಯುವ ಮುಖಂಡ ಕೆ.ಈ. ಕಾಂತೇಶ್, ಪ್ರಮುಖರಾದ ಶಿವಶಂಕರ್, ಉಮಾಪತಿ ಇನ್ನಿತರರು ಇದ್ದರು.




ಗುರುದೇವ GURUDEVA MONTHLY

RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722